Crl.Misc.23/2023
PW. 1

ದಿಃ 06-01-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನ್ನ ಮಾಹಿತಿ ಪ್ರಕಾರ ಸತ್ಯ ಮತ್ತು ಸರಿಯಾಗಿರುತ್ತವೆ . ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**ನಾನು ಈ ಅರ್ಜಿಯಲ್ಲಿ ದಾಖಲೆಗಳನ್ನು ಹಾಜರ ಪಡಿಸಿದ್ದು,**

1) ಅರ್ಜಿದಾರಳು ಮತ್ತು ಎದುರುದಾರನು ಮದುವೆಯಾಗಿರುವ ಕುರಿತು ಸಲ್ಲಿಸಿರುವ ನಿಖಾನಾಮೆಯ ಹೊತ್ತಿಗೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು ನಿಶಾನೆಗೊಳಿಸಲಾಯಿತು.
2) ಸದರಿ ನಿಖಾನಾಮೆಯ ಭಾಷಾಂತರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 (ಎ) ಎಂದು ನಿಶಾನೆಗೊಳಿಸಲಾಯಿತು.
3) ಅರ್ಜಿದಾರ ನಂ.2 ಇತಳ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು ನಿಶಾನೆಗೊಳಿಸಲಾಯಿತು.
4) ವಿವಾಹದ ಸಮಯದಲ್ಲಿ ತೆಗೆದಿರುವ ಎರಡು ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಏಕಕಾಲಕ್ಕೆ ನಿಪಿ-3 ಎಂದು ನಿಶಾನೆಗೊಳಿಸಲಾಯಿತು.

**ಅರ್ಜಿದಾರಳ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧಿಕಾರಿಗಳು, ಶಹಾಬಾದ